ದಿನ ಪತ್ರಿಕೆ
Reg No. M 1299
Daily & Weekly
For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 309 | ಸೋಮವಾರ 7—6—1943 | 3 ಪೈ

Opera -- Aryamala
ಅಪೆರಾ——
4 ನೇ ಅಮೋಘ ವಾರ
ಆರ್ಯಮಾಲ
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಾ ಮುಂತಾದವರು ಪಾತ್ರನಹಿಸಿರುವರು

ಅಗಾಧವಾಗಿ ಹೆಚ್ಚು ಇಂದಿನ ವರ್ತಮಾನ

ಕಳೆದ ಶನಿವಾರ ಡಾ || ಗೋಬೆಲ್ಸ್ ರೇಡಿಯೋ ಭಾಷಣ ಮಾಡುತ್ತಾ, ಬ್ರಿಟಿಷ್ ವಿಮಾನ ಧಾಳಿ ಹೆಚ್ಚುಹೆಚ್ಚಾಗಿ ಪದೇಪದೇ ಆಗುತ್ತಿದೆ- ಈ ವಿಮಾನ ಧಾಳಿಗೆ ನಮ್ಮ ಉತ್ತರ ಸಬ್‌ಮೆರಿನ್ ಎಂದು ಹೇಳುತ್ತಾ, ನಾವು ಶತ್ರುಗಳ ಸಮುದ್ರದಲ್ಲಿ ನೌಸುಗಳನ್ನು ಹೇರಳವಾಗಿ ಹರಡುತ್ತಿದ್ದೇವೆ, ಯೂರೋಪು ಮುತ್ತುತ್ತೇವೆಂದು ಬೆದರಿಸುವರು, ಆದು ಆಗದ ಕೆಲಸ. ಅಲ್ಲದೆ ಫೆಬ್ರವರಿ ತಿಂಗಳಿಂದ ೩ || ಮಿಲಿಯ ಜನರು ಕೆಲಸಕ್ಕೆ ಹೊಸದಾಗಿ ಸೇರಿರುತ್ತಾರೆ, ಜರ್ಮನಿಗೆ ಆದ ನಷ್ಟವನ್ನು ನಾವು ತೆಗೆದುಕೊಳ್ಳದೇ ಇರುವುದಿಲ್ಲ. ಈಗ ಜರ್ಮನಿಯರೆಲ್ಲರೂ ಸಹಾಯಮಾಡಬೇಕು. ನಾವು ಕೈಲಾದ್ದನ್ನು ಮಾಡಿದ್ದೇವೆ ಮತ್ತು ಮಾಡುತ್ತಿದ್ದೇವೆ, ನಾವೂ ಇಂಗ್ಲೆಂಡಿನ ಮೇಲೆ ಬಲವಾದ ಧಾಳಿಯನ್ನು ಪುನಃ ಆರಂಭಿಸಿರುತ್ತೇವೆ. ರಷ್ಯಾದ ಯುದ್ಧದ ವಿಷಯದಲ್ಲಿ ಈಗ ನಾನು ಒಂದು ಮಾತನ್ನೂ ಹೇಳುವುದಿಲ್ಲ, ಎಂದು ಹೇಳಿದನು.

ಮಿ || ಚರ್ಚಿಲ್ಲರ ಆಗಮನ

ಮುಂದಿನ ಪಾರ್ಲಿಮೆಂಟು ಅಧಿವೇಶನದಲ್ಲಿ ಪ್ರಧಾನಮಂತ್ರಿ ಮಿ || ಚರ್ಚಿಲ್ಲರು ತಮ ಪ್ರವಾಸದ ಚರಿತ್ರೆಯನ್ನು ತಿಳಿಸುವರು. ಇಂಗ್ಲೆಂಡನ್ನು ಸೇರಲು ಅಲ್ಜೀರಿಯಾದಿಂದ ಒಂದ ವಿಮಾನದ ಸುತ್ತಲೂ ಕಾವಲಿಗಾಗಿ ಅನೇಕ ವಿಮಾನಗಳಿದ್ದವು. ಇವರು ಇಳಿದ ಸ್ಥಳದಲ್ಲಿಯೂ ವಿಮಾನ ಕಾವಲು ಜೆನ್ನಾಗಿತ್ತು. ಬಂದಕೂಡಲೇ ತಮ್ಮ ಸಹೋದ್ಯೋಗಿಗಳನ್ನೂ ಇತರ ಮುಖಂಡರನ್ನೂ ಕಂಡು ತಾವು ಜನರಲ್ ಐಸಿಕ್ ಹಾನರ್ಸ್ ಸಂಗಡ ಮಾತನಾಡಿದ ವಿಷಯವನ್ನು ಹೇಳಿದರು. ತಾವು ಅಲ್ಜೀರಿಯಾದಲ್ಲಿ ಮೊದಲಸೇ ಸೈನ್ಯದ ನಾಯಕರಾದ ಜನರಲ್ ಆಂಡರ್‌ಸನ್ ಮತ್ತು ಇತರ ಸಿವಿಲಿಟರಿ ಅಧಿಕಾರಿಗಳನ್ನು ಕಂಡರು. ಜನರಲ್ ಜೂಯಿನ್ನರನ್ನು ಸಹಾ ನೋಡಿದರು. ಆಮೇಲೆ ರಣರಂಗಕ್ಕೆ ಎಲ್ಲರೂ ಹೋದರು. ಅಲ್ಲಿ ವೈಸ್ ಮಾರ್ಷಲ್ ಕನಿಂಗ್‌ಹ್ಯಾಮರವರ ಜೊತೆಯಲ್ಲಿ ಭೋಜನ ಮಾಡಿಕೊಂಡು, ರಣರಂಗದಲ್ಲಿ ವಿಮಾನ ನಡೆಸುವವರ ಸಂಗಡ ಭಾಷಣ ಮಾಡಿದರು, ಆಗ ಅಲ್ಲಿ ಮಿ || ಹೆರಾಲ್ಡ್ ಮೆಕ್ಮಿಲನ್ ಮತ್ತು ಮಿ || ಈಡನ್ ಸಹಾ ಇದ್ದರು. ಮಿ || ಚರ್ಚಿಲ್ಲರ ಆಫ್ರಿಕಾ ಸಂಚಾರದಲ್ಲಿ ಅಮೇರಿಕಾ ಸೈನ್ಯದ ಜನರಲ್ ಮಾರ್ಷಲರು ಇದ್ದರು. ಯೂರೋಪಿನಲ್ಲಿ ಇಸ್ಟೇನು ಬಲವಾದ ಧಾಳಿಯಾಗುವುದೆಂದು ಅಮೇರಿಕಾದವರು ಹರ್ಷಚಿತ್ತರಾಗಿರುವರು. ಶತ್ರುಗಳನ್ನು ನಾಶಮಾಡುವ 'ಪ್ಲಾನ್' ಆಗಲೇತಯಾರಾಗಿದೆಯಂತೆ. ಮಿ || ಚರ್ಚಿಲ್ಲರು ತಫ್ಸಿಕಾದ ಕಾರ್ಥೇಜಿಯಲ್ಲಿ 3000 ಸೈನಿಕರಿಗೆ ಬಂದು ಭಾಷಣ ಮಾಡಿ, ಅವರ ಶಕ್ತಿಯನ್ನು

ಕಾಂಗ್ರೆಸ್ಸಿಗೆ ಜಯ

ಸತ್ಯಮೂರ್ತಿಯವರ ಸ್ಥಾನದಲ್ಲಿ ಸೆಂಟ್ರಲ್ ಅಸೆಂಬ್ಲಿಯ ಚುನಾವಣೆಯು ಮದರಾಸಿನಲ್ಲಿ ನಡೆಯಿತು. ಕಾಂಗ್ರೆಸ್ ಪಕ್ಷದಲ್ಲಿ ನಿಂತಿದ್ದ ಶ್ರೀ ಗಡ್ಡಿ ರಂಗಯ್ಯ ನಾಯ್ಡುರು 3150 ವೋಟುಗಳಿಂದ ಜಯಶೀಲರಾದರು. ಸೋತವರು ಜಸ್ಟಿಸ್ ಪಾರ್ಟಿಯ ಶ್ರೀ ಸುಂದರರಾವ್ ನಾಯ್ಡು. ವೋಟು ಮಾಡಲು ಬಂದಿದ್ದವರು 6361, ಈ ಪೈಕಿ ಕಾಂಗ್ರೆಸ್ಸಿಗೆ 4654 ವೋಟುಗಳು, ಜಸ್ಟಿಸ್ ಪಾರ್ಟಿಗೆ 1508 ವೋಟುಗಳು !

ಶನಿವಾರ ಕರಾಚಿಗೆ ಫೆಡರಲ್ ಕೋರ್ಟಿನ ಖಾಯಂ ಛೀಫ್ ಜಡ್ಜಿಯವರಾದ ಸರ್ ವಿಲಿಯಂ ಪ್ಯಾಟ್ರಿಕ್ ಸ್ಪೆನ್ಸರ್‌ರವರು ಬಂದಿಳಿದರು.

ಅಕೋಲಾ ರೈಲ್ವೆ ಅನಾಹುತದಲ್ಲಿ ಸತ್ತವರು 66 ರಿಂದ 75 ಕ್ಕೆ ಏರಿದೆ. ಗಾಯಗೊಂಡವರ ಪೈಕಿ 140 ರಲ್ಲಿ 60 ಜನರು ಕೃತಾವಸ್ಥೆಯಲ್ಲಿದ್ದಾರೆ. ಅದೇ ಕಾಲದಲ್ಲಿ ಅಕೋಲಾ ನಗರದಲ್ಲಿ ಒಂದು ಕಾರ್ಖಾನೆಯಲ್ಲಿ ಬೆಂಕಿ ಹತ್ತಿಕೊಂಡು 5 ಲಕ್ಷ ರೂ. ಬಾಳುವ ಪದಾರ್ಥಗಳು ನಷ್ಟವಾದವು.

ಅರ್ಜೆಂಟೈನಾದ ಮಂತ್ರಿಮಂಡಲವು ರಾಜೀನಾಮೆ ಕೊಟ್ಟು ಲಾಪ್ಲಾಟಾಕ್ಕೆ ಹೋದರು. ಗಲಭೆಗೆ ಕಾರಣವಿಲ್ಲ. ಎಲ್ಲಾ ಶಾಂತ ಸ್ಥಿತಿಯಲ್ಲಿದೆ. ಹೊಸ ರಾಜ್ಯಾಂಗದಿಂದ ಸ್ಪೇನಿನ ಸ್ನೇಹಭಾವಕ್ಕೆ ಕುಂದಕಬರಬಹುದು, ಮತ್ತು ಅಕ್ಸಿಸ್ಸ್ ರೊಡನೆ ಸ್ನೇಹಭಾವ ತ್ಯಜಿಸಬಹುದು

ಮಿ || ರೂಸ್ವೆಲ್ಟರೂ ಮಿ || ಚರ್ಚಿಲರೂ ಮಾತುಕತೆ ನಡೆಸಿದ ಫಲವಾಗಿ ಇನ್ನು ಮುಂದೆ ಜಪಾನಿನ ಮೇಲೆ ಹೂಡುವ ಯುದ್ಧದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸುವುದೆಂದು ಅಮೇರಿಕನ್ನರು ಅಭಿಪ್ರಾಯ ಪಡುತ್ತಾರೆ.

ಏಪ್ರಿಲ್ 21 ರಲ್ಲಿ ವೆಲ್ಲೂರು ಮುನಿಸಿಪಲ್ ಕೌನ್ಸಿಲ್ಲಿನವರು ಬೇಗಂ ಅಬ್ದುಲ್ ಕಲಾಂ ಅಜಾದ್‌ರ ಮರಣದಿಂದ ಉಂಟಾದ ಅನುತಾಪದ ಬಗ್ಗೆ ಮಾಡಿದ ನಿರ್ಣಯವನ್ನು ಮದರಾಸು ಸರಕಾರದವರು ಬೊಂಬಾಯಿ ಸರಕಾರಕ್ಕೆ ತಿಳಿಸಲು ನಿರಾಕರಿಸುತ್ತಾರೆ.

ಕೊಚ್ಚಿನ್ ಸರಕಾರದವರು ಇನ್ನು ಮುಂದೆ ಪ್ರಿಂಟು ಮಾಡುವ ಪಾಠಶಾಲೆಯ ಪುಸ್ತಕದ ಬೆಲೆಯನ್ನು ಶೇಕಡ 30 ರಂತೆ ಹೆಚ್ಚಿಸಲು ಅನುಮತಿ ಕೊಟ್ಟಿದಾರೆ.

ಪ್ಯಾರಿಸ್ಸಿಗೆ 75 ಮೈಲಿಯಲ್ಲಿರುವ ಎಪರ್ನೆಯು ಅಗ್ನಿಜ್ವಾಲೆಯಿಂದ 75 ಮಿಲಿಯ ಫ್ರಾಂಕ್ ಬಾಳುವ ಸಾಮಗ್ರಿಗಳು ಭಸ್ಮವಾದವು.

ರಷ್ಯಾದಲ್ಲಿ ಯಾರ ಶಕ್ತಿ ಅಂತರಕ್ಷದಲ್ಲಿ ಹೆಚ್ಚೆಂದು ತಿಳಿಯಲು ರಷ್ಯನರೂ ಜರ್ಮನರೂ ಅಗಾಧ ವಿಮಾನಗಳನ್ನು ಜಮಾಯಿಸುತ್ತಿರುವರು.

ಬ್ರಿಟಿಷ್ ವಿಮಾನಗಳು ಅಕ್ಯಾಬ್ ಮೇಟಿ ಧಾಳಿ ನಡೆಸಿ ರಂಗೂನಿನಲ್ಲಿದ್ದ ರೇಡಿಯೋ ನಿಲ್ದಾಣದ ಮೇಲೂ ಧಾಳಿ ಮಾಡಿದವು.

ಭಾರತದಿಂದ 25 ಮಂದಿ ವೈಮಾನಿಮಾನಿಕರು ಫ್ಲೈಟರ್ ವಿಮಾನ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ಹೊರಟಿರುವರು ಅಲ್ಲದೆ 25 ಮಂದಿ ಕೆನಡಾಕ್ಕೆ ಹೋಗಿ ಅಲ್ಲಿ ವಿಮಾನ ಶಿಕ್ಷಣ ಪಡೆದು, ಅಲ್ಲಿಂದ ಫ್ಲೈಟರ್ ವಿಮಾನ ಶಿಕ್ಷಣವನ್ನು ಪಡೆಯಲು ಇಂಗ್ಲೆಂಡಿಗೆ ಬರುವರು.

ಪ್ಲೈಸರಾಯರು ಬಂದು ಆರ್ಡಿನೆನ್ಸ್‌ನ್ನು ಹೊರಡಿಸಿರುವರ. ಇದರಿಂದ ಇನ್ನು ಮುಂದೆ ಸ್ಪೆಷಲ್ ಕೋರ್ಟ್ಸು ವಜಾ ಆಗುವುದು. ಮಾಮೂಲ್ ಕೋರ್ಟುಗಳಲ್ಲಿಯೇ ಎಲ್ಲಾ ಕೇಸುಗಳ ವಿಚಾರಣೆಯು ನಡೆಯುವುದು.

ಅಮೇರಿಕಾದಲ್ಲಿ ಆಫ್ಘನ್ ರಾಯಭಾರಿಯ ಕಛೇರಿಯು ಪ್ರಾರಂಭವಾಯಿತು. ಇದೇ ಮೊದಲನೇ ಆಪರ್ತಿ.

ವಾರ್ತಾತರಂಗ

ಗ್ರೀಸ್ ರಾಜಧಾನಿಯಾದ ಅಥೆನ್ಸ್ ನಲ್ಲಿ ಹೊಟ್ಟೆಗಿಲ್ಲದೆ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಸತ್ತಿರುವರೆಂದು ತಿಳಿಯು ಬಂದಿದೆ.

ಂ ಂ

ನೀಗ್ರೋ ನಿವಾಸಕಾರರು ಇಷ್ಟರಲ್ಲೆ ಅಕ್ಸಿಸ್ಸರ ಮೇಲೆ ಧಾಳಿ ಮಾಡಿಸುವರಂತೆ. ಈಗಲಾದರೂ ನೀಗ್ರೋ ಜನರು ಕಣ್ಣಿಗೆ ಬಿದ್ದರಲ್ಲಾ !

ಂ ಂ

ನೀಲಗಿರಿ ಮತ್ತು ಉದಕಮಂಡಲ ಇರತಕ್ಕವರಿಗೆ ಅನುಕೂಲವಾಗುವಂತೆ ಕರಾಚಿಯಿಂದ ಗೋಧಿ ಮತ್ತು ಗೋಧಿ ಹಿಟ್ಟು ರವಾನೆಯಾಗಿದೆ.

ಂ ಂ

ಮದರಾಸಿನಲ್ಲಿ ಕಾಗದದ ಅಭಾವದಿಂದ ಎಸ್. ಎಸ್. ಎಲ್. ಸಿ. ಯ 1943 ನೇ ಇಸವಿಯ ಪುಸ್ತಕಗಳೇ 1944 ಕ್ಕೂ ಇರತಕ್ಕದ್ದೆಂದು ಆಜ್ಞೆಯಾಗಿದೆ.

ಂ ಂ

ಲಕ್ನೋ ನಿವಾಸದಲ್ಲಿ ನಜಿಬಜಾರಿನಲ್ಲಿ ಬೆಂಕಿ ಕಾಣಿಸಿಕೊಂಡು 5 ಜನರು ಸತ್ತರು, 2 ಸಾವಿರ ಜನರಿಗೆ ನಿಲ್ಲಲು ಮನೆಯಿಲ್ಲ, ಮತ್ತು 40 ಸಾವಿರ ರೂಪಾಯಿ ಸೋಟುಗಳು ಬೂದಿಯಾದವು, ಐದೂವರೆ ಲಕ್ಷ ರೂಪಾಯಿ ಬೆಲೆಬಾಳುವ ಬೊಂಬುಗಳು ಅಗ್ನಿಪಾಲಾಯಿತು ಸುಕಾರದವರು ನಿರಾಶ್ರಿತರಿಗೆ ಸಹಾಯ ಮಾಡುತ್ತಿದ್ದಾರೆ.

ಂ ಂ

ಫಿರೋಜಪುರದಿಂದ ಇಬ್ಬರು ಮಿಲಿಟರಿಯವರು ತಪ್ಪಿಸಿಕೊಂಡು ಓಡಿ ಹೋಗುತ್ತಿದ್ದಾಗ, ಪೋಲೀಸಿನವರು ಇವರನ್ನು ಹಿಂಬಾಲಿಸಿ ಎರಡು ಕಡೆಯವರೂ ಗುಂಡು ಹಾರಿಸಿದರು. ಈ ಚಿಕ್ಕ ಯುದ್ಧವು ಎಂಡು ಗಂಟೆಗಳ ಕಾಲ ಸಹೆದು ಒಬ್ಬ ಪೋಲೀಸು ಕಾನ್ಸ್ಟೆಬಲು ಸತ್ತನು.

ಂ

ರಷ್ಯಾದಿಂದ ಕನ್ನಡದ ಎಂಡನೇ ಸೈನ್ಯವನ್ನು ಹಂಗೆರಿಯು ಹಿಂದಕ್ಕೆ ಕರೆಸಿದೆ ಇದರಿಂದ ಇದು ರಣರಂಗದಿಂದ ಪಾರಾಗಿದೆ ಎನ್ನಬಹುದು. ರೊಮೇನಿಯಾ ರಾಜನಿಗೂ ಮಂತ್ರಿಗೂ ಸರಿಬೀಳುತ್ತಿಲ್ಲ. ರಾಜನು ಯುದ್ಧ ಮುಕಾಯ್ತ್ನಮಾಡಿ ರಷ್ಯಾದಿಂದ ತಮ್ಮ ಸೈನ್ಯವನ್ನು ಕರೆಸಬೇಕೆಂದಿರುವನು,

ಂ ಂ

ರೀಗಾದಲ್ಲಿದ್ದ 1000 ಜನರನ್ನು ಜರ್ಮನಿಯವರು ಗಲ್ಲಿಗೇರಿಸಿದರೆಂದು ತಿಳಿಯು ಬಂದಿದೆ.

ಆಫ್ರಿಕಾ ಯುದ್ಧಕ್ಕೆ ಭಾರತದ ಸಹಾಯ

ಉತ್ತರ ಆಫ್ರಿಕಾ ಯುದ್ಧದ ಮೊದಲು ಎರಡೂವರೆ ವರ್ಷದಲ್ಲಿ ಭರತದಿಂದ ಆಹಾರ ಸಾಮಗ್ರಿಗಳೆಲ್ಲವೂ ಬಂದವು ಅಲ್ಲದೆ ಮುಸೋಲಿನಿಯ ಆಫ್ರಿಕಾ ಸಾಂಬ್ರಾಜ್ಯವು ನಾಶವಾಗುವುದಕ್ಕೂ ಭಾರತದ ಸೇನೆಯು ಕಾರಣವು. ಭಾರತದ ಕಾನ್ವಾಯಿ ಹಡಗುಗಳಲ್ಲೇ ಒಂದೂವರೆ ಮಿಲಿಯನ್ ಟನ್ ಆಹಾರ ಪದಾರ್ಥಗಳು ಸಾಗಿವೆ. ಅಮೆರಿಕಾ ಸಹಾಯ ಒದಗುವುದಕ್ಕಿಂತ ಮುಂಚೆ, ಮಿತ್ರಸೇನೆಗಳಿಗೆ ಬೇಕಾದ ಎಲ್ಲಾ ಸಾಮಗ್ರಿಗಳೂ ಭಾರತದಿಂದಲೇ ಬರಬೇಕಾಗಿತ್ತು. ಭಾರತವು ಉತ್ತರ ಆಫ್ರಿಕಾ ರಣರಂಗಕ್ಕೆ ಕಳುಹಿಸದಿದ್ದಿದ್ದರೆ, ರಷ್ಯಾಕ್ಕೆ ಮಿತ್ರರು ಸರಬರಾಜು ಮಾಡಲು ಬಹಳ ತೊಂದರೆಯಾಗುತ್ತಿತ್ತು. ಈ ವಿಷಯದಲ್ಲಿ ಭಾರತವು ಬಹಳ ಸಹಾಯಮಾಡಿದೆ.

ಭಾರತದ ಉಕ್ಕಿನಿಂದ, ಉಕ್ಕಿನ ಗುಡಿಸಲು ಮನೆ ಗ್ಯಾರೇಜ್ ಆಸ್ಪತ್ರೆ ಏರಪ್ಲೇನು ನಿಲ್ದಾಣ ಇನೆಲ್ಲಾ ಕಟ್ಟಲ್ಪಟ್ಟವು. ಒಂದು ಸಾವಿರ ಎಕರೆಗೆ ಬೇಕಾದಷ್ಟು ಉಕ್ಕು ಬಂದಿತು; ಸಾವಿರಾರು ಮೈಲಿ ಕುಡಿಯುವ ನೀರನ್ನು ಒದಗಿಸಲು ಭಾರತದ ಉಕ್ಕಿನ ನಲ್ಲಿಗಳನ್ನು ಭಾರತದ ಇಂಜಿನಿಯರುಗಳ ಸೇನೆ ಹೋದಂತೆ ರೈಲ್ವೇ ಲೈನುಗಳನ್ನು ಜೋಡಿಸಿದರು

ಮೆಡಿಟರೇನಿಯನ್ನಿಂದ ಟುಬ್ರೂಕಿಗೆ ರೈಲ್ವೆಯನ್ನು ನಿರ್ಮಾಣ ಮಾಡಿದವರು ಭಾರತೀಯರು. ಭಾರತೀಯರು ತಯಾರಿಸಿದ ವಿದ್ಯುತ್ತಂತಿ, ವಿದ್ಯುತ್ ಬೀಸಣಿಗೆ, ನೀರಿನ ಪಂಪು, ಬ್ಯಾಟರಿ ಇತ್ಯಾದಿಗಳು ಹಿಸಲಾಯಿತು. ಬ್ರಿಟನ್ನಿನಿಂದ ಇವನ್ನು ತರಿಸಲು ಸುತ್ತಿ ಬರಲು ಸಾವಕಾಶವಾಗುತ್ತಿತ್ತು. ಭಾರತದಿಂದ ಆರ್. ಎ. ಎಫ್. ವಿಮಾನಗಳಿಗೆ 5 ಮಿಲಿಯ ಸೆಲ್‌ಗಳು ಕಳುಹಿಸಲಾಗಿದೆ ಬ್ಯಾಟರಿ ಲಿಖ್ಖು ಹೇಳುವುದು ಬಹಳ ಕಷ್ಟವಾಗುವುದು. ಯಪಟ್ರ್ಯಕ್ ರಣರಂಗವಲ್ಲಿ ಉಪಯೋಗಿಸಿದ ಬಂದೂಕಗಳೂ ಭಾರತದಲ್ಲಿ ತಯಾರಾದ್ದುವು— ಹೀಗೆಂದು ಅಮೇರಿಕಾ ಯುದ್ಧ ಕಛೇರಿಯವರು ಪ್ರಕಟಿಸಿರುತ್ತಾರೆ.

—ಂ—

ಅಕ್ಕರ ಸಾನಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

For good printing
Saraswati Printing Press
Lansdowne Buildings, Mysore
Lakshminarasimha Press ದೊರೆಯುವ ಸ್ಥಳ—
Srirampet, Mysore
ಸತ್ಯವಾದಿ ಆಫೀಸ್ ಮೈಸೂರು

Ranjit — — Satyabhama
ರಣಜಿತ್ ಟಾಕೀಸ್
ವೈ. ವಿ. ರಾವ್ ಮತ್ತು ಪುಷ್ಪವಲ್ಲಿ
ಪಾತ್ರವಹಿಸಿರುವ
[ತೆಲುಗು] ಸತ್ಯಭಾಮಾ [ತೆಲುಗು]

ಶಕ್ತಿ ಸಾಧನೆಗೆ ಸುಲಭೋಪಾಯವು
ರಸಾಯನ ರಾಜ
ಶಕ್ತಿಸುಧಾ
ಸೇವನೆ ಎಂಬುದು ನಿಮ್ಮ ಜ್ಞಾಪದಲ್ಲಿರಲಿ.
ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ಪಸ್ಮುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿವೆ
ಬೆಲೆ 1 ರೂಪಾಯಿ

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್ ತಯಾರಿಕೆ
ವಾಣಿ OR [Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ
ಸಂಗೀತರತ್ನ ಟಿ. ಚೌಡಯ್ಯ, ಕಲ್ಹರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಸಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.
ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

Edited, Printed & published by M. S. Krishna Rao, at the Satyavadi Press. Chamaraja Agrahar, Mysore.